# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

**ಸಿ.ಸಿ.ನಂಃ 811 /15**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಉಮೇಶ್ ಹೆಚ್.ಎನ್ | | **ಸಿ.ಡಬ್ಲ್ಯೂ ಃ 3** |
| **ತಂದೆ ಹೆಸರು** | ಃ ನರಸಿಂಹಮೂರ್ತಿ | | **ಪಿ.ಡಬ್ಲ್ಯೂ ಃ 1** |
| **ವಯಸ್ಸು** | ಃ 31 ವರ್ಷ | **ಪ್ರಮಾಣೀಕರಿಸಿದ ದಿಃ** | **18/07/2019** |
| **ವೃತ್ತಿ** | ಃ ಶಿಕ್ಷಕ | | |
| **ವಾಸ** | ಃ ಹೊಸಗಾವಿ, ಮದ್ದೂರು ತಾಲ್ಲೂಕು | | |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ**

ನಾನು ದಿಃ 17.11.2011 ರಿಂದ 10.06.2016 ರವರೆಗೆ ಹೊನಪುರ ಅಬಕಾರಿ ವಲಯ ಕಚೇಯಲ್ಲಿ ಅಬಕಾರಿ ರಕ್ಷಕನಾಗಿ ಕೆಲಸ ಮಾಡಿದ್ದೇನೆ.

ದಿಃ 03.04.2014 ರಂದು ಗಣ್ಣಿಕಡ ಕ್ರಾಸ್ ಗ್ರಾಮದಲ್ಲಿ ಚಾ.ಸಾ 6 ರವರೊಂದಿಗೆ ಗಸ್ತು ಕರ್ತ್ಯವ್ಯದಿಲ್ಲಿದ್ದಾಗ ಚಾ.ಸಾ 6 ರವರಿಗೆ ಬಂದ ಮಾಹಿತಿ ಪರಿಶೀಲಿಸಲು ಗಣ್ಣಿಕಡ ಕ್ರಾಸ್ ಹತ್ತಿರ ಚಾ.ಸಾ 1 ಮತ್ತು 2 ರವರನ್ನು ಪಂಚರಾಗಿ ಬರಮಾಡಿಕೊಂಡು ಅಲ್ಲಿ ರಸ್ತೆ ಕಾವಲು ನಡೆಸುತ್ತಿದ್ದಾಗ ಕೆಲವು ವಾಹನಗಳ ತಪಾಸನೆ ಮಾಡುತ್ತಿದ್ದಾಗ ಸಂಜೆ 7 ಗಂಟೆ ಸಮಯದಲ್ಲಿ ಚನ್ನರಾಯಪಟ್ಟನ ಕಡೆಯಿಂದ 1 ದ್ವಿಚಕ್ರ ವಾಹನ ಬರುತ್ತಿದ್ದು ನಾವು ಟಾರ್ಚ ಲೈಟ್ ಸಹಾಯದಿಂದ ವಾಹನ ನಿಲ್ಲಿಸುವಂತೆ ಸೂಚನೆ ನೀಡಿದಾಗ ವಾಹನ ಸವಾರ ಸುಮಾರು 20 ರಿಂದ 25 ಮಿಟರ ದೂರದಲ್ಲಿ ವಾಹನವನ್ನು ನಿಲ್ಲಿಸಿ ಗಾಬರಿಯಿಂದ ಓಡಿ ಹೋಗಿರುತ್ತಾರೆ. ನಾವುಗಳು ಸದರಿ ವಾಹನ ಪರಿಶೀಲಿಸಲಾಗಿ ಪೆಟ್ರೋಲ್ ಟ್ಯಾಂಕ್ ಮೆಲೆ 1 ರಟ್ಟಿನ ಪೆಟ್ಟಿಗೆ ಕಂಡು ಬಂದಿದ್ದು ಅದನ್ನು ಪಂಚರ ಸಮಕ್ಷಮ ತೆರೆದು ನೋಡಲಾಗಿ ಅದರಲ್ಲಿ ಓರಿಜನಲ್ ಚಾಯ್ಸ ಡಿಲಕ್ಸ ವಿಸ್ಕಿ ಎಂಬ ಹೆಸರಿನ 180 ಮಿಲಿ ಪ್ರಮಾಣದ 48 ಮದ್ಯ ತುಂಬಿದ ಟೆಟ್ರಾ ಪ್ಯಾಕಗಳು ಕಂಡು ಬಂದಿರುತ್ತವೆ. ಅಲ್ಲಿ ಸದರಿ ಮದ್ಯ ದಾಸ್ತಾನು ಸಾಗಿಸಲು ಯಾವುದೆ ರಹದಾರಿ ಸಿಕ್ಕಿರುವುದಿಲ್ಲ. ಸದರಿ ಬೈಕ್ ಹಿರೋ ಹೊಂಡಾ ಸ್ಪೆಂಡರ ಪ್ಲಸ್ ಬ್ಲೂ-ಸಿಲವರ್ ಮಿಕ್ಸ ಬಣ್ಣದಾಗಿತ್ತು ನೊಂದಣಿ ಸಂಖ್ಯೆ ಕೆಎ-13-ಡಿಸಿ-3253 ಎಂದು ನಮೂದಸಲಾಗಿತ್ತು. ವಾಹನದಲ್ಲಿ ಅದರ ದಾಖಲಾತಿಗಳು ದೊರೆಯಲಿಲ್ಲ. ನಂತರ ಪಂಚರನ್ನು ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವರು ನಮಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ನಂತರ ದೊರೆತ ಮದ್ಯದ ಪೈಕಿ 26 ಪಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯಾಗಿ ತೆಗೆಯಲಾಯಿತು. ಸ್ಥಳದಲ್ಲಿ ಬಿಳಿ ಬಟ್ಟೆಯಿಂದ ಒಂದು ಚೀಲ್ ತಾಯಾರಿಸಿ ಮಾದರಿ ಮದ್ಯದ ಪಾಕೇಟಗಳನ್ನು ಅದರಲ್ಲಿ ಹಾಕಿ ದಾರದಿಂದ ಅದನ್ನು ಕಟ್ಟಿ ಇಲಾಖಾ ಸೀಲು ಸಂಖ್ಯೆ 343 ಎಂದು ಅರಗಿನ ಮುದ್ರೆ ಮಾಡಲಾಯಿತು. ನಂತರ ಮಾದರಿ ಚೀಟಿ ತಯಾರಿಸಿ ಅದಕ್ಕೆ ಪಂಚರ ಸಹಿ ಪಡೆದು ಕೈಚೀಲಿನ ಮೇಲೆ ಅಂಟಿಸಲಾಯಿತು.

ನಂತರ ಮಾದರಿ ಸೀಲಿನ ನಕಲು ತಯಾರಿಸಿ ಇಲಾಖಾ ಸೀಲು 343 ರಿಂದ ಅರಗಿನ ಮುದ್ರೆ ಮಾಡಲಾಯಿತು. ನಂತರ ಸಂಜೆ 7-30 ರಿಂದ 8-30 ರವೆರಗೆ ಸ್ಥಳ ಮಹಜರ ಜರುಗಿಸಲಾಯಿತು. ಸಾಕ್ಷಿ ಈಗ ಮಹಜರನ್ನ ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಮಜರನ್ನು ನಿ.ಪಿ 1 ಹಾಗೂ ಸಾಕ್ಷಿಯ ಸಹಿಯನ್ನು 1 ಎ ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 26 ಖಾಲಿ ಟೆಟ್ರಾ ಪಾಕೇಟಗಳನ್ನು ನೋಡಿ ಅವುಗಳನ್ನು ನಿ.ಪಿ 1ರ ಮಹಜರಡಿ ಮೇಲೆ ಹೇಳಿದಂತೆ ಅಮಾನತ್ತು ಪಡಿಸಿಕೊಂಡಿರುವುದಾಗಿ ನುಡಿದಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ ಹಾಗೂ 1 ಬಿಳಿ ಚೀಲವನ್ನು ಮು.ಮಾ 2 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆತ ಘಟನೆಯ ದಿನ ಮೇಲೆ ಹೇಳಿದಂತೆ ಬೈಕನ್ನು ಬಿಟ್ಟು ಓಡಿ ಹೋದ ಸವಾರ ಎಂದು ನುಡಿಯುತ್ತಾರೆ.

ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.